ಸಾಕ್ಷಿಯನ್ನು ದಿನಾಂಕ 07.07.2015 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂಎಸಬಿ ವಕೀಲರಿಂದಃ-

ಉಚ್ಚ ನ್ಯಾಯಾಲಯದಲ್ಲಿ ಈ ಕೇಸಿನ ಮೇಲೆ ಮೇಲ್ಮನವಿ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ.ಉಚ್ಚ ನ್ಯಾಯಾಲಯದಲ್ಲಿ ಅಪೀಲು ವಿಚಾರಣೆ ಹಂತದಲ್ಲಿದ್ದು ನಾನು ಅದರಲ್ಲಿ ಕುಳಗೇರಿ ವಕೀಲರ ಮೂಲಕ ಹಾಜರ ಆಗಿದ್ದೇನೆ ಎನ್ನುವುದು ಸರಿಯಲ್ಲ. ಉಚ್ಚ ನ್ಯಾಯಾಲಯದಿಂದ ನನಗೆ ಯಾವುದೇ ನೋಟಿಸು ಬಂದಿಲ್ಲ. ಉಚ್ಚ ನ್ಯಾಯಾಲಯದಲ್ಲಿ ಅಪೀಲು ವಿಚಾರಣೆ ಹಂತದಲ್ಲಿ ಇದ್ದು, ಅದರಲ್ಲಿ ನಾನು ನೋಟಿಸು ತೆಗೆದುಕೊಂಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಈ ಕೇಸು ಕಬ್ಜಾ ಪಡೆದುಕೊಳ್ಳಲು ಹಾಕಿದ್ದೇನೆ. ಸದರಿ ಅರ್ಜಿಯಲ್ಲಿ ಸಿಟಿ ಸರ್ವೆ ನಂಬರ ಅದರ ಅಳತೆ ಬರೆದಿಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ಅಪೀಲು ನ್ಯಾಯಾಲಯದಲ್ಲಿ ಹೇಗೆ ಆಗಿದೆ ಹಾಗೆ ಕೇಳಿದ್ದೇನೆ. ಡಿಕ್ರಿಯಲ್ಲಿ ದಾವಾ ಆಸ್ತಿಗಳ ಕ್ಷೇತ್ರ ಬರೆಯದೇ ಇರುವುದರಿಂದ ಇಲ್ಲಿಯವರೆಗೆ ನಾನು ಅದನ್ನು ತಿದ್ದುಪಡಿ ಮಾಡಲು ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಎಲ್ಲ ದಾಖಲೆಗಳನ್ನು ನಮ್ಮ ವಕೀಲರಿಗೆ ತೋರಿಸಿದ್ದೇನೆ. ಕೆಳ ನ್ಯಾಯಾಲಯದಲ್ಲಿ ಹಾಗೂ ಅಪೀಲು ನ್ಯಾಯಾಲಯದಲ್ಲಿ ಕ್ಷೇತ್ರ ಬರೆಯದೆ ಇರುವುದರಿಂದ ಸದರಿ ಡಿಕ್ರಿಯನ್ನು ಅಮಲ್ ಜಾರಿ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ಎಷ್ಟು ಆದೇಶ ಆಗಿದೆ ಅಷ್ಟು ಕೊಡಬೇಕು. ನನ್ನ ಅರ್ಜಿಯಲ್ಲಿ ಆಸ್ತಿಯ ಅಳತೆ ತೋರಿಸಿಲ್ಲ. ದಾವಾ ಆಸ್ತಿಯ ಬಗ್ಗೆ ಸಿಟಿ ಸರ್ವೆ ಉತಾರ ಹಾಜರಪಡಿಸಿದ್ದೇವೆ. ಈ ಅರ್ಜಿಗೂ ಸಹ ನಾನು ಸಿಟಿಎಸ್ ಉತಾರ ಹಾಕಿಲ್ಲ ಆದ್ದರಿಂದ ಅಂತಿಮ ಡಿಕ್ರಿ ಮಾಡಲು ಬರುವುದಿಲ್ಲ ಎನ್ನುವುದು ಸರಿಯಲ್ಲ. ಸದರಿ ಉತಾರನ್ನು ವಕೀಲರಗೆ ಕೊಟ್ಟಿದ್ದೇನೆ ಅದನ್ನು ಹಾಜರಪಡಿಸಿದ್ದೇನೆ ಎಂದು ಹೇಳಿದ್ದಾರೆ. ಯಾವುದೇ ದಾಖಲೆ ಹಾಜರಪಡಿಸಿಲ್ಲ ಹಾಗೂ ಅಳತೆ ತೋರಿಸಿಲ್ಲ ಆದ್ದರಿಂದ ಅಂತಿಮ ಡಿಕ್ರಿ ಮಾಡಲು ಬರುವುದಿಲ್ಲ ಎನ್ನುವುದು ಸರಿಯಲ್ಲ. ವಾಟ್ನಿ ಮಾಡಲು ಹೋದರು ಸಹ ವಾಟ್ನಿ ಮಾಡಲು ಬರದೇ ಇರುವಂತಹ ಆಸ್ತಿಗಳು ಇರುತ್ತವೆ ಎನ್ನುವುದು ನಿಜ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಹುಬ್ಬಳ್ಳಿ. ಓ. ಹೇ. ಕೆ. ಸ. ಎ. ಒಪ್ಪಿಕೊಳ್ಳಲಾಯಿತು.

ದಿ: 07.07.2015 ಒಂದನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹುಬ್ಬಳ್ಳಿ.